

# ತ್ರಿವರ್ಣ ಸಂಭ್ರಮ!

ಅಮೃತ ಮಥನ

**ಸ್ವಾತಂತ್ರ್ಯದ ಅಮೃತಮಹೋತ್ಸವ ಆಚರಣೆಗೆ ಫ್ಯಾಷನ್ ಜಗತ್ತು ಸಖತ್ ಆಗಿ ಸಜ್ಜಾಗಿದೆ. ಹೊಸ ವಿನ್ಯಾಸದ, ತಿರಂಗ ವರ್ಣದ ಸಲ್ವಾರ್, ಕ್ರಾಪ್‌ಟಾಪ್, ಆ್ಯಕ್ಸೆಸರೀಸ್‌ಗಳೊಂದಿಗೆ ಈ ಸಂಭ್ರಮಕ್ಕೆ ಸಾಥಿ ಕೊಡುತ್ತಿದೆ.**

■ ಉಮಾ ವೇಣೂರು

ಹಬ್ಬ ಎಂದರೆ ಅಲ್ಲಿರುವುದು ಸಂಭ್ರಮ, ಸಡಗರ. ಅದು ರಾಷ್ಟ್ರೀಯ ಹಬ್ಬವೇ ಆಗಿರಲಿ, ಧಾರ್ಮಿಕ ಆಚರಣೆಯೇ ಆಗಿರಲಿ. ಅಲ್ಲಿ ಉತ್ಸವದ ಕಳೆ. ಹೊಸ ಉಡುಗೆ, ರುಚಿಕರ ಅಡುಗೆ ಹಬ್ಬದ ಭಾಗ.

ಹಬ್ಬಗಳನ್ನು ಸಂಭ್ರಮಿಸಬೇಕಾದರೆ ಹೊಸ ದಿರಿಸು ಬೇಕೇ ಬೇಕು. ಸದ್ಯ ಸ್ವಾತಂತ್ರ್ಯೋತ್ಸವ ರಾಷ್ಟ್ರೀಯ ಹಬ್ಬದ ಸಡಗರ. ಫ್ಯಾಷನ್ ಜಗತ್ತು ಕೂಡ ಭರ್ಜರಿಯಾಗಿ ಸಜ್ಜಾಗಿದೆ ಈ ಸಂಭ್ರಮವನ್ನು ಆಚರಿಸಲು. ಸ್ವಾತಂತ್ರ್ಯೋತ್ಸವ ಎಂದರೆ ಮಕ್ಕಳಿಗೆ ಎಲ್ಲಿಲ್ಲದ ಸಂಭ್ರಮ. ಫ್ಯಾಷನ್ ಬಯಸುವ ಮಹಿಳೆಯರಿಗೂ ಇದು ತಮ್ಮನ್ನು ಗುರುತಿಸಲು ಒಂದು ಸದವಕಾಶವಾದ್ದರಿಂದ ಫ್ಯಾಷನಬಲ್ ಉಡುಪು, ಆ್ಯಕ್ಸೆಸರೀಸ್ ತೊಡುವ ಹಂಬಲ. ಹೀಗಾಗಿ ಫ್ಯಾಷನ್ ಜಗತ್ತು ಸಹ ತಿರಂಗಾ ಫ್ಯಾಷನ್ ಉಡುಪು, ಒಡವೆ, ಆ್ಯಕ್ಸೆಸರೀಸ್ ವಿನ್ಯಾಸದಲ್ಲಿ ಪೈಪೋಟಿ ನಡೆಸುತ್ತಿದೆ.

ಕೇಸರಿ ಬಿಳಿ ಹಸುರು ಬಣ್ಣಗಳ ಸೀರೆ, ಸಲ್ವಾರ್, ಸ್ಕರ್ಟ್, ಕುರ್ತಿಯಲ್ಲಿ ಹಲವು ವಿನ್ಯಾಸಗಳ ಉಡುಪು ಖಾದಿ, ಕಾಟನ್, ನೈಲಾನ್, ಡೆನಿಮ್ ಮುಂತಾದ ಬಟ್ಟೆಗಳಲ್ಲಿ ತಯಾರಾಗಿ ಮಕ್ಕಳ, ಮಹಿಳೆಯರ ಗಮನಸೆಳೆಯುತ್ತಿದೆ. ಸ್ವಾತಂತ್ರ್ಯೋತ್ಸವ ದಿನ ಮೂರು ಬಣ್ಣಗಳ ಉಡುಗೆ ತೊಡುಗೆಯಲ್ಲಿ ಮಿಂಚಿ, ರಾಷ್ಟ್ರಪ್ರೇಮ ಬಿಂಬಿಸಲು ಫ್ಯಾಷನ್ ಜಗತ್ತು ಸಖತ್ ಆಗಿ ಸಜ್ಜಾಗಿದೆ. ಈ ಮೂಲಕ ರಾಷ್ಟ್ರೀಯ ಹಬ್ಬದ ಸಂಭ್ರಮವನ್ನು ಹಂಚಿಕೊಳ್ಳುವ ಹವಣಿಕೆ ಇದೆ. ತ್ರಿವರ್ಣದಲ್ಲಿ ಉಡುಗೆ, ಕೃತಕಾಭರಣ, ಬ್ಯಾಂಡ್, ಪಾದರಕ್ಷೆಗಳಂತಹ ಆ್ಯಕ್ಸೆಸರೀಸ್ ತುಂಬ ಚೆನ್ನಾಗಿ ಕಾಣುತ್ತದೆ.

## ತ್ರಿವರ್ಣ ಕುರ್ತಿ

ಸಲ್ವಾರ್, ಚೂಡಿದಾರ್, ಕುರ್ತಿ... ಹೀಗೆ ಈ ವೈವಿಧ್ಯದ ಉಡುಪು ಧರಿಸುವಾಗ ಕೇಸರಿ ಬಣ್ಣದ ಕುರ್ತಿ ಅಥವಾ ಟಾಪ್ ಒಳ್ಳೆಯದು. ಇದಕ್ಕೆ ಹಸುರು ಬಣ್ಣದ ಪ್ಯಾಂಟ್ ಮತ್ತು ಬಿಳಿ ಬಣ್ಣದ ದುಪಟ್ಟಾ ಒಳ್ಳೆಯ ಕಾಂಬಿನೇಷನ್. ಬಿಳಿ ಬಣ್ಣದ ಪ್ಯಾಂಟ್, ಹಸುರು ಬಣ್ಣದ ದುಪಟ್ಟಾ ಆದರೂ ಈ ತ್ರಿವರ್ಣದ ಉಡುಗೆ ಸ್ವಾತಂತ್ರ್ಯೋತ್ಸವಕ್ಕೆ ಹೇಳಿ ಮಾಡಿಸಿದ್ದು. ಈ ಉಡುಪುಗೆ ತಕ್ಕುದಾದ ತ್ರಿವರ್ಣದ